# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1568
2. ಸದಸ್ಯರ ಹೆಸರು : ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ: : 24.9.2021
4. ಉತ್ತರಿಸುವವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

<table>
<tr><th>ಕ್ರಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ಕಾರಾವಾರ ಜಿಲ್ಲೆ ಜೋಯಿಡಾ ತಾಲ್ಲೂಕಿನ ತಾಲ್ಲೂಕ್ ಪಂಚಾಯತ್ ಕಛೇರಿಯಲ್ಲಿ ಹಲವಾರು ವರ್ಷಗಳಿಂದ ಒಂದೇ ಕಡೆ ಸೇವೆ ಸಲ್ಲಿಸುತ್ತಾ ಇತರೆ ಬೇರೆ ಬೇರೆ ಚಟುವಟಿಕೆಯಲ್ಲಿ ಪಾಲ್ಗೊಳುತ್ತಿರುವ ಸಿಬ್ಬಂದಿ ಜನರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?: (ವಿವರ ನೀಡುವುದು).</td><td>ಸಿಬ್ಬಂದಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಮಾಹಿತಿಯು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.</td></tr>
<tr><td>ಆ</td><td>ಸದರಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ ಜನರು ಯಾವ ಯಾವ ಹುದ್ದೆಯಲ್ಲಿರುತ್ತಾರೆ; ಹಾಗೂ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ; ಯಾವ ಕಾರಣಕ್ಕಾಗಿ ಒಂದೇ ಸ್ಥಳದಲ್ಲಿರುತ್ತಾರೆ (ಸವಿಸ್ತಾರವಾದ ವರದಿಯನ್ನು ನೀಡುವುದು).</td><td><table>
<tr><th>ಕ್ರಸಂ.</th><th>ಸಿಬ್ಬಂದಿಯ ಹೆಸರು</th><th>ಹುದ್ದೆ</th><th>ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.</th></tr>
<tr><td>1</td><td>ಜಿ.ವ್ಹಿ.ಭಟ್ಟ</td><td>ಪ್ರ.ದ.ಸ</td><td>14</td></tr>
<tr><td>2</td><td>ಪ್ರವೀಣಕುಮಾರ ದೊಡ್ಡಮನಿ</td><td>ಕಿ.ಇಂ.</td><td>7</td></tr>
<tr><td>3</td><td>ಜಿ.ಆರ್.ಪಾಂಗಿ</td><td>ದ್ವಿ.ದ.ಸ</td><td>13</td></tr>
<tr><td>4</td><td>ಎಂ.ಎಸ್.ಕಾಮ್ರೇಕರ್</td><td>ದ್ವಿ.ದ.ಸ</td><td>28</td></tr>
<tr><td>5</td><td>ಮನೋಜ ಲಕ್ಷ್ಮೇಶ್ವರ</td><td>ಗ್ರೂಪ್–ಡಿ</td><td>21</td></tr>
</table>
ಈ ಹಿಂದೆ ಅಸ್ತಿತ್ವದಲ್ಲಿದ್ದ ನಿಯಮಗಳನುಸಾರ ಸದರಿ ನೌಕರರ ಜೇಷ್ಠತಾ ಘಟಕವು ಆಯಾಯ ಜಿಲ್ಲಾ ಪಂಚಾಯತ್‌ಗಳಾಗಿದ್ದು, ಅವರನ್ನು ಬೇರೆ ಜಿಲ್ಲೆಗೆ ವರ್ಗಾವಣೆ ಮಾಡಲು ಅವಕಾಶ ಇರಲಿಲ್ಲ. ಆದ್ದರಿಂದ, ಸದರಿ ನೌಕರರು ದೀರ್ಘಾವಧಿಯಿಂದ ಒಂದೆ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಅವಕಾಶವಾದಂತಾಗಿದೆ.</td></tr>
<tr><td>ಇ</td><td>ಅವಧಿ ಮೀರಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಯಾವ ಕಾರಣಕ್ಕಾಗಿ ಒಂದೇ ಸ್ಥಳದಲ್ಲಿ ಅವಕಾಶ ಕಲ್ಪಿಸಲಾಗಿದೆ; (ಸ್ಪಷ್ಟವಾದ ವಿವರ ನೀಡುವುದು) ಅವಧಿ ಮೀರಿರುವ ಸರಕಾರಿ ನೌಕರರನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಬೇರೆ ಕಡೆ ವರ್ಗಾವಣೆ</td><td>ಹೊಸದಾಗಿ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ಗಳ ವೃಂದ ಬಲ ಹಾಗೂ ನೇಮಕಾತಿ ವಿಧಾನವನ್ನು ರೂಪಿಸವ ಉದ್ದೇಶಕ್ಕೆ ಅಧಿಸೂಚನೆ ಸಂಖ್ಯೆ:ಗ್ರಾಅಪ 142 ಕೆ.ಎಸ್.ಎಸ್. 2016, ದಿನಾಂಕ:20.6.2021 ರಲ್ಲಿ ಕರ್ನಾಟಕ ಸಾಮಾನ್ಯ ಸೇವೆ (ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ ನಿಯಮಗಳು) 2020 ನ್ನು ರಚಿಸಲಾಗಿದೆ. ಸದರಿ</td></tr>
</table>

| | | |
|---|---|---|
| | ಮಾಡಲಾಗುವುದೇ? (ವಿವರ ನೀಡುವುದು). | ನಿಯಮಗಳನುಸಾರ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಸಿಬ್ಬಂದಿಗಳಿಗೆ ರಾಜ್ಯ ಮಟ್ಟದಲ್ಲಿ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಿ ಹೊರಡಿಸಿದ್ದಲ್ಲಿ ಸದರಿ ನೌಕರರು ರಾಜ್ಯ ಮಟ್ಟದ ನೌಕರರಾಗುವುದಲ್ಲದೆ, ಅವರನ್ನು ಅಂತರ್ ಜಿಲ್ಲಾ ವರ್ಗಾವಣೆ ಮಾಡಲು ಅವಕಾಶವಾಗುತ್ತದೆ.<br><br>ಒಂದು ವೇಳೆ ಯಾವುದೇ ನೌಕರರ ವಿರುದ್ಧ ನಿರ್ದಿಷ್ಟ ಆರೋಪಗಳು ಕಂಡು ಬಂದಲ್ಲಿ ಅವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳುವುದಲ್ಲದೆ, ಬೇರೆ ಕಛೇರಿಗೆ ವರ್ಗಾವಣೆ ಮಾಡುವ ಅಗತ್ಯತೆಯನ್ನು ಗಮನಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ. |

ಗ್ರಾಅಪ 199 ಕೆ.ಎಸ್.ಎಸ್ 2021(ಇ)

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು